# ಸ್ಮರಿಸುವೆ ನಾ ನಿಮ್ಮ ಚರಣಕಮಲ ವಿಜಯರಾಯಾ

ಶ್ರೀ ಭಾಗಣ್ಣದಾಸರು(ಶ್ರೀಗೋಪಾಲದಾಸರು) ತಮ್ಮ ಸ್ವರೂಪೋದ್ಧಾರಕ ಗುರುಗಳಾದ ಶ್ರೀವಿಜಯದಾಸರ ಮೇಲೆ ಸ್ಮರಿಸುವೆ ನಾ ನಿಮ್ಮ ಚರಣಕಮಲವನ್ನು ವಿಜಯರಾಯಾ ಅಯ್ಯಾ ಶರಣ ಜನರಪ್ರಿಯ ಪರಮ ಕರುಣಾನಿಧೇ ವಿಜಯರಾಯಾ ಎಂದು ಪ್ರಾರಂಭವಾಗುವ ಕರುಣಾಕವಚವೆಂಬ ಕೃತಿಯನ್ನು ರಚಿಸಿದ್ದಾರೆ. ಈ ಕೃತಿಯಲ್ಲಿ ಶ್ರೀವಿಜಯದಾಸರ ದಿವ್ಯಜೀವನ ಚರಿತ್ರೆಯ ಪ್ರಮುಖ ಘಟನೆಗಳು ಹಾಗೂ ಭಕ್ತವರ್ಗಕ್ಕೆ ಅವರಿಂದಾದ ಮಹದುಪಕಾರವನ್ನು ಸ್ಮರಿಸಿದ್ದಾರೆ. ಶ್ರೀಗೋಪಾಲದಾಸರು ಈ ಕೃತಿಯ ೪ನೇ ನುಡಿಯಲ್ಲಿ ಶ್ರೀ ವಿಜಯರಾಯರು **ಭಾಗವತಧರ್ಮವನ್ನು** ವಹಿಸಿ ಮೂರು ಬಾರಿ ಕಾಶಿ(ಗಂಗಾ) ಯಾತ್ರೆಯನ್ನು ಮಾಡಿದ್ದನ್ನು (ಭಾಗವತ ಧರ್ಮ ವಹಿಸಿ ತ್ರಿರಾವರ್ತಿ ವಿಜಯರಾಯ ಅಯ್ಯಾ ಭಾಗೀರಥಿಯ ಚೆನ್ನಾಗಿ ಸೇವಿಸಿದ್ಯೋ ವಿಜಯರಾಯ ೪ ), ನಂತರ ೧೬, ೧೭ನೇ ನುಡಿಯಲ್ಲಿ ಶ್ರೀವಿಜಯರಾಯರಿಂದ ಮಂತ್ರೋಪದೇಶವನ್ನು ಪಡೆದವರು ಹತ್ತು ಇಪ್ಪತ್ತು ಎಂದರೆ ಮೂವತ್ತು ಜನ ತಮ್ಮ **ಹೃತ್ಕಮಲದಲ್ಲಿನ ಹರಿಯ ರೂಪ(ಬಿಂಬರೂಪವನ್ನು)**ತಿಳಿದು ಅಪರೋಕ್ಷಜ್ಞಾನವನ್ನು ಹೊಂದಿದ್ದರು (ಭಕ್ತ ಜನರಿಗೆ ತತ್ವೋಪದೇಶವ ಮಾಡಿ ವಿಜಯರಾಯ ಅಯ್ಯಾ ಹೃತ್ಕಮಲದಿ ಹರಿಯ ತಿಳಿಸಿ ಸದ್ಗತಿಗಭಯವಿತ್ಯೋ ನೀ ವಿಜಯರಾಯ ೧೬ ಪ್ರತ್ಯಕ್ಷವಾಗಿ ಹತ್ತಿಪ್ಪತ್ತು ಜನರಿಗೆ ತತ್ವೋಪದೇಶಮಾಡಿ ವಿಜಯರಾಯ ಅಯ್ಯಾ ಹೃತ್ಕಮಲದಿ ಹರಿಯ ತಿಳಿಸಿ ಸದ್ಗತಿಗಭಯಾವಿತ್ತೆ ವಿಜಯರಾಯ ೧೭ ) ಎಂದು ಶ್ರೀವಿಜಯರಾಯರ ಮಹಿಮೆ ವರ್ಣಿಸಿದ್ದಾರೆ. ಇದರಿಂದ ಹರಿದಾಸ ಪರಂಪರೆಯಲ್ಲಿ ಭೃಗು ಋಷಿಗಳ ಅಂಶ ಸಂಭೂತರಾದ ಶ್ರೀವಿಜಯರಾಯರ ಮಹತ್ವ ಹಾಗೂ ಅವರ ಉಪಾಸನಾ ವಿಧಾನದ ಮಹತ್ವವು ಸಹ ತಿಳಿದು ಬರುತ್ತದೆ. ಹಾಗು ಶ್ರೀ ಗೋಪಾಲದಾಸರ ಈ ನುಡಿಗಳಿಂದ ಶ್ರೀವಿಜಯ ದಾಸರು ಅನುಸರಿಸಿದ ಹರಿದಾಸಪರಂಪರೆಯಲ್ಲಿ–

**೧.ಭಾಗವತಧರ್ಮದ ಅನುಷ್ಠಾನ**

ಹಾಗು ಈ ಭಾಗವತಧರ್ಮದಲ್ಲಿನ ಉಪಾಸನಾ ಪದ್ಧತಿಯಾದ

**೨.ಹೃತ್ಕಮಲದಲ್ಲಿ ಹರಿಯನ್ನು ಕಾಣುವಿಕೆ**

ಎಂಬುವ ಎರಡು ಪ್ರಧಾನ ತತ್ವಗಳಿವೆಯೆಂಬುದು ಸಹ ಜಿಜ್ಞಾಸುಗಳಿಗೆ ತಿಳಿದುಬರುತ್ತದೆ. ಈ ಎರಡು ಪ್ರಧಾನ ಅಂಶಗಳಿಗೆ ಪೂರಕವಾದ ವಿಷಯವನ್ನು ಮುಂದಿನಂತೆ ನಿರೂಪಿಸಬಹುದು.

## ೧. ಹರಿದಾಸರು ಅನುಸರಿಸಿದ ಭಾಗವತಧರ್ಮಾನುಷ್ಠಾನವು

ಸ್ಕಾಂದಪುರಾಣ ವೈಷ್ಣವ ಖಂಡದ ವೈಶಾಖಮಾಸ ಮಾಹಾತ್ಮೆಯಲ್ಲಿ ಭಾಗವತಧರ್ಮಕಥನವೆಂಬ ಇಪ್ಪತ್ತನೇ ಅಧ್ಯಾಯದಲ್ಲಿ ಶ್ಲೋಕ ೫೨ರಿಂದ ೬೩ರವರೆಗೆ ವ್ಯಾಧ ಹಾಗು ಶಂಖ ಋಷಿಯ ಸಂವಾದದಲ್ಲಿ ಭಾಗವತಧರ್ಮ ಹಾಗೂ ಭಾಗವತರ ಲಕ್ಷಣಗಳು ಶ್ರೀಭಗವಾನ ವೇದವ್ಯಾಸರ ವಾಣಿಯಲ್ಲಿ ಮುಂದಿನಂತೆ ಹೇಳಲ್ಪಟ್ಟಿದೆ –

ವ್ಯಾಧನು ಪ್ರಶ್ನೆ ಮಾಡುತ್ತಾನೆ – ಎಲೈ ಮುನಿಯೇ ಭಾಗವತರಾದ ಭಗವದ್ಭ ಕ್ತರು ಆಚರಿಸಬೇಕಾದ ಧರ್ಮಗಳು ಯಾವುವು? ಯಾವ ಧರ್ಮಗಳ ಆಚರಣೆಯಿಂದ ವಿಷ್ಣುಪ್ರೀತಿಯುಂಟಾಗುವುದು? ಅವುಗಳನ್ನೆಲ್ಲಾ ಕೇಳಲು ಇಚ್ಛಿಸುತ್ತೇನೆ ಪೂರ್ಣವಾಗಿ ಆ ವಿಷ್ಣುಪ್ರೀತಿಕರವಾದ ಧರ್ಮಗಳನ್ನು ಹೇಳುವವನಾಗು ಎಂದು.

ಈ ಪ್ರಶ್ನೆಗೆ ಉತ್ತರಿಸುತ್ತಾ ಶಂಖ ಋಷಿಯು – ಯಾವ ಧರ್ಮಾಚರಣೆಯಿಂದ ಚಿತ್ತಶುದ್ಧಿಯುಂಟಾಗುವುದೋ ಹಾಗೂ ಸಜ್ಜನರಾದ ಸಾತ್ವಿಕರಿಗೆ (ಈ ಅಧ್ಯಾಯದ ಪ್ರಾರಂಭದಲ್ಲಿ ಸಾತ್ವಿಕ,

ರಾಜಸ, ತಾಮಸರೆಂಬ ತ್ರಿವಿಧಜೀವರ ಲಕ್ಷಣಗಳು ವಾಸುದೇವನ ಸೃಷ್ಟಿಸ್ಥಿತ್ಯಾದಿ ಲೀಲೆಗಳು ಲಿಂಗಭಂಗ ಇತ್ಯಾದಿ ವಿಷಯಗಳು ಹೇಳಲ್ಪಟ್ಟಿದೆ)ಉಪಕಾರಿಯಾಗುವ ಧರ್ಮಗಳು ಯಾವುದಿದೆಯೋ, ಯಾವುದು ನಿಂದೆಗೆ ಒಳಪಟ್ಟಿಲ್ಲವೋ ಅಂದರೆ ಲೋಕದ ಸರ್ವಸಜ್ಜನ ಹಿತಕಾರಿಯಾದದ್ದೋ ಅದೇ **ಸಾತ್ವಿಕ ಧರ್ಮವಾದ ಭಾಗವತಧರ್ಮ**ವೆನಿಸುತ್ತದೆ. ವೇದ ಹಾಗು ಸ್ಮೃತಿಗಳನುಸಾರಿಯಾದ, ಯಾವುದೇ ಫಲಾಪೇಕ್ಷೆಯಿಲ್ಲದ, ಲೋಕವ್ಯವಹಾರಕ್ಕೆ ಅನುಕೂಲವಾದದ್ದೋ ಅಂತಹ ಧರ್ಮವೇ ಸಾತ್ವಿಕವಾದ ಭಾಗವತಧರ್ಮವೆನಿಸುತ್ತದೆ. ಈ ಸಾತ್ವಿಕವಾದ ಭಾಗವತ ಧರ್ಮವು ವರ್ಣಾಶ್ರಮವ್ಯವಸ್ಥೆಯಿಂದ ನಾಲ್ಕುವಿಧಗಳಾಗಿರುತ್ತದೆ, ಹಾಗೂ ಕರ್ಮಾಚರಣೆಯ ನಿಯಮದಿಂದ ನಿತ್ಯ, ನೈಮಿತ್ತಿಕ, ಕಾಮ್ಯವೆಂದು ಮೂರು ಬಗೆಯಾಗಿರುತ್ತದೆ. ಎಲ್ಲರೂ ತಮ್ಮ ವರ್ಣಾಶ್ರಮೋಚಿತ ಕರ್ಮಗಳನ್ನು ಆಚರಿಸುತ್ತಾ ಅವುಗಳನ್ನು **ವಿಷ್ಣುವಿನಲ್ಲಿ ಅರ್ಪಣೆ ಮಾಡುವುದರಿಂದ ಮಾತ್ರ ಅವು ಸಾತ್ವಿಕಕರ್ಮಗಳಾಗುತ್ತವೆ,** ಇಂತಹ ವಿಷ್ಣ್ವರ್ಪಣೆಯ ಕರ್ಮಗಳೇ **ಭಾಗವತ ಧರ್ಮ**–ವೆನಿಸುತ್ತದೆ. ವಿಷ್ಣುವನ್ನು ಹೊರತು ಪಡಿಸಿ ಅನ್ಯದೇವತೆಗಳನ್ನು ಉದ್ದೇಶಿಸಿ ಆ ದೇವತಾನುಗ್ರಹವನ್ನು ಅಪೇಕ್ಷಿಸಿ ಮಾಡುವ ಕರ್ಮಗಳು **ರಾಜಸ**ವೆನಿಸುತ್ತದೆ. ಇನ್ನು ಯಕ್ಷರು, ರಾಕ್ಷಸರು, ಪಿಶಾಚಾದಿಗಳ ಅನುಗ್ರಹವನ್ನು ಅಪೇಕ್ಷಿಸಿ ಮಾಡುವ ಹಿಂಸಾತ್ಮಕವಾದ ಮತ್ತು ನಿಂದಿತ ಧರ್ಮಗಳು **ತಾಮಸ ಕರ್ಮ**–ಗಳೆನಿಸುತ್ತದೆ. ಸತ್ವಗುಣಗಳಿಂದ ಕೂಡಿದವರಾಗಿ ಸಾತ್ವಿಕವಾದ ಮಂಗಳವನ್ನುಂಟು ಮಾಡುವ **ನಿಷ್ಕಾಮಧರ್ಮಗಳನ್ನು ವಿಷ್ಣುಪ್ರೀತಿಕರವಾದ ಉದ್ದೇಶದಿಂದ ನಿರಂತರವೂ ಮಾಡುವವರು ಭಾಗವತರೆಂದು** ಶಾಸ್ತ್ರದಲ್ಲಿ ಹೇಳಲ್ಪಟ್ಟಿದ್ದಾರೆ. ಯಾರ ಮನಸ್ಸು ಬಿಡದೇ ವಿಷ್ಣುವಿನಲ್ಲಿ ನೆಲೆಸಿರುವುದೋ, **ನಾಲಿಗೆಯು ಸರ್ವೋತ್ತಮನಾದ ವಿಷ್ಣುವಿನ ನಾಮ**–ವನ್ನು ನುಡಿಯುತ್ತಿರುವುದೋ, **ಹೃದಯದಲ್ಲಿ ವಿಷ್ಣುವಿನ** ಪಾದಕಮಲಗಳನ್ನು **ಧ್ಯಾನ** ಮಾಡುತ್ತಿರುವುದೋ ಅಂತಹವರೇ **ಭಾಗವತರೆಂದು** ತಿಳಿಯಬೇಕು. ಯಾವಾಗಲೂ ಸದಾಚಾರದಲ್ಲಿಯೇ ಇದ್ದು, ಸರ್ವರಿಗೂ ಉಪಕಾರವನ್ನು ಮಾಡುವವರೋ, **ನಾನು ನನ್ನದು ಎಂಬುದನ್ನು ಬಿಟ್ಟಿರುವವರೋ** ಅಂತಹವರೇ **ಭಾಗವತ**ರೆಂದು ತಿಳಿಯಬೇಕು. ಯಾರಿಗೆ ವಿಷ್ಣುವನ್ನು ಪ್ರತಿಪಾದಿಸುವ ಶಾಸ್ತ್ರದಲ್ಲಿ ವಿಶ್ವಾಸವಿದೆಯೋ, ಇಂತಹ ಶಾಸ್ತ್ರವನ್ನು ತಿಳಿಸಿಕೊಡುವ **ಗುರು**(ವಾಯುದೇವರಲ್ಲಿ ಹಾಗೂ ಅವರ ಅನುಯಾಯಿಗಳಲ್ಲಿ)**ಗಳಲ್ಲಿ ವಿಶ್ವಾಸವಿದೆಯೋ,** ಸಾತ್ವಿಕಕರ್ಮಗಳಲ್ಲಿ ಆಸಕ್ತಿಯಿದೆಯೋ ಹಾಗೂ ನಿರಂತರವಾಗಿ ವಿಷ್ಣುಭಕ್ತಿಯನ್ನು ಉಳ್ಳವರಾಗಿದ್ದಾರೆಯೋ ಅಂತಹವರೇ ಭಾಗವತರೆಂದು ತಿಳಿಯಬೇಕು. ಶ್ರುತಿಸ್ಮೃತಿಯಲ್ಲಿ ಹೇಳಲ್ಪಟ್ಟ ಶಾಶ್ವತನಾದ **ವಿಷ್ಣುವಿನ ಸನಾತನ ಧರ್ಮಗಳೇ ಭಾಗವತ ಧರ್ಮಗಳು,** ಯಾರಿಗೆ ವಿಷ್ಣುಪ್ರೀತಿಕರವಾದ ಈ **ಶಾಶ್ವತಧರ್ಮಗಳ ಆಚರಣೆಯಲ್ಲಿ ಸರ್ವದಾ ಮನಸ್ಸುಂಟಾಗುವುದೋ** ಅವರೇ **ಭಾಗವತರು.**

ವ್ಯಾಧ ಉವಾಚ : ಕೇ ವಾ ಭಾಗವತಾ ಧರ್ಮಾಃ ಕೈರ್ವಿಷ್ಣುಶ್ಚ ಪ್ರಸೀದತಿ
ತಾನಹಂ ಶ್ರೋತುಮಿಚ್ಛಾಮಿ ಸಾಂಪ್ರತಂ ವದ ನೋ ಮುನೇ ॥೨
ಶಂಖ ಉವಾಚ – ಯೇನ ಚಿತ್ತವಿಶುದ್ಧಿಸ್ಸ್ಯಾತ್ ಯಃ ಸತಾಮುಪಕಾರಕಃ
ತಂ ವಿದ್ಧಿ ಸಾತ್ವಿಕಂ ಧರ್ಮಂ ಯಚ್ಚ ಕೇನಾಪ್ಯನಿಂದಿತಃ ॥೩
ಶ್ರುತಿಸ್ಮೃತ್ಯುದಿತೋ ಯಸ್ತು ಯದಿ ನಿಷ್ಕಾಮಿಕೋ ಭವೇತ
ಯಸ್ತು ಲೋಕಾಽವಿರುದ್ಧೋಽಪಿ ತಂ ಧರ್ಮಂ ಸಾತ್ವಿಕಂ ವಿದುಃ ॥೪
**ಚತುರ್ವಿಧಾ ಹಿ ತೇ ಧರ್ಮಾಃ ವರ್ಣಾಶ್ರಮ ವಿಭಾಗತಃ**
**ನಿತ್ಯನೈಮಿತ್ತಿಕಾಃ ಕಾಮ್ಯಾ ಇತಿ ತೇ ಚ ತ್ರಿಧಾ ಮತಾಃ ॥೫**
**ತೇ ಸರ್ವೇ ಸ್ವಸ್ವಧರ್ಮಾಶ್ಚ ಯದಾ ವಿಷ್ಣೋಃ ಸಮರ್ಪಿತಾಃ**
**ತದಾ ವೈ ಸಾತ್ವಿಕಾ ಜ್ಞೇಯಾ ಧರ್ಮಾ ಭಾಗವತಾಃ ಶುಭಾಃ ॥೬**
ದೇವತಾಂತರದೈವತ್ಯಾಃ ಸಕಾಮಾ ರಾಜಸಾ ಮತಾಃ ॥೭

ಯಕ್ಷರಕ್ಷಃ ಪಿಶಾಚಾದಿ ದೈವತ್ಯಾ ಲೋಕನಿಷ್ಠುರಾಃ
ಹಿಂಸಾತ್ಮಕಾ ನಿಂದಿತಾಶ್ಚ ಧರ್ಮಾಸ್ತೇ ತಾಮಸಾಃ ಸ್ಮೃತಾಃ ೫೮
ಸತ್ವಸ್ಥಾಃ ಸಾತ್ವಿಕಾನ ಧರ್ಮಾನ ವಿಷ್ಣು ಪ್ರೀತಿಕರಾನ್ಶುಭಾನ
ಕುರ್ವಂತನೀಹಯಾ ನಿತ್ಯಂ ತೇ ವೈ ಭಾಗವತಾಃ ಸ್ಮೃತಾಃ ೫೯
ಯೇಷಾಂ ಚಿತ್ತಂ ಸದಾ ವಿಷ್ಣೌ ಜಿಹ್ವಾಯಾಂ ನಾಮ ವೈ ವಿಭೋಃ
ಪಾದೌ ಚ ಹೃದಯೇ ಯೇಷಾಂ ತೇ ವೈ ಭಾಗವತಾಃ ಸ್ಮೃತಾಃ ೬೦
ಸದಾಚಾರರತಾ ಯೇ ಚ ಸರ್ವೇಷಾಮುಪಕಾರಕಾಃ
ಸದೈವ ಮಮತಾಹೀನಾಃ ತೇ ವೈ ಭಾಗವತಾಃ ಸ್ಮೃತಾಃ ೬೧
ಯೇಷಾಂ ಚ ಶಾಸ್ತ್ರೇ ವಿಶ್ವಾಸೋ ಗುರೌ ಸಾಧುಷು ಕರ್ಮಸು
ಯೇ ವಿಷ್ಣುಭಕ್ತಾಃ ಸತತಂ ತೇ ವೈ ಭಾಗವತಾಃ ಸ್ಮೃತಾಃ ೬೨
ಯೇಷಾಂ ಹಿ ಸಮ್ಮತಾ ಧರ್ಮಾಃ ಶಾಶ್ವತಾ ವಿಷ್ಣುವಲ್ಲಭಾಃ
ಶ್ರುತಿಸ್ಮೃತ್ಯುದಿತಾ ಯೇ ಚ ತೇ ಧರ್ಮಾಃ ಶಾಶ್ವತಾ ಮತಾಃ ೬೩

ಪರಮಭಾಗವತೋತ್ತಮರಾದ ಶ್ರೀಮದಾನಂದತೀರ್ಥಭಗವತ್ಪಾದರ ದ್ವಾದಶ ಸ್ತೋತ್ರದ ಎಂಟನೇ ಅಧ್ಯಾಯ ಶ್ಲೋಕ ೧೧ರಲ್ಲಿ ಮೇಲಿನ ಸ್ಕಾಂದಪುರಾಣಶ್ಲೋಕದಲ್ಲಿನ ಶ್ರೀಭಗವಾನ ವೇದವ್ಯಾಸರ ಅಭಿಪ್ರಾಯದ ಸಾರವನ್ನು ಸಂಗ್ರಹಿಸುವ ನುಡಿಮುತ್ತು ಒಂದು ಮುಂದಿನಂತಿದೆ –

**ಅಕ್ಷಯಂ ಕರ್ಮಯಸ್ಮಿನ ಪರೇಸ್ವರ್ಪಿತಂ**
**ಪ್ರಕ್ಷಯಂ ಯಾಂತಿ ದುಃಖಾನಿ ಯನ್ನಾಮತಃ**
**ಅಕ್ಷರೋಯೋಽಜರಃ ಸರ್ವದೈವಾಮೃತಃ**
**ಕುಕ್ಷಿಗಂ ಯಸ್ಯ ವಿಶ್ವಂ ಸದಾಜಾದಿಕಮ**
**ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಮ ೧೧**

**ಮೇಲಿನ ಆಚಾರ್ಯರ ದ್ವಾದಶಸ್ತೋತ್ರದ ಶ್ಲೋಕದ ಅಭಿಪ್ರಾಯವು ಶ್ರೀ ವಿಶ್ವಪತಿ ತೀರ್ಥರ ವ್ಯಾಖ್ಯಾನದಲ್ಲಿ ಮುಂದಿನಂತಿದೆ –**

**ಅಕ್ಷಯಮ** ಇತಿ **ಯಸ್ಮಿನ ಪರೇ** ಸರ್ವೋತ್ತಮೇ ಶ್ರೀವಾಸುದೇವೇ, **ಸ್ವರ್ಪಿತಂ** ಸುಷ್ಟು ಸಮರ್ಪಿತಮ **ಕರ್ಮ** ವಿಹಿತಯಜ್ಞಾದಿಕರ್ಮ ನ ವಿದ್ಯತೇ ಕ್ಷಯೋ ನಾಶೋ ಯಸ್ಯ **ತದಕ್ಷಯಂ** ಅಕ್ಷಯಫಲಕಂ ಭವತಿ **ದುಃಖಾನಿ** ಸಮಸ್ತಕ್ಲೇಶಾಃ **ಯನ್ನಾಮತಃ** ಯಸ್ಯ ನಾಮ್ನಃ **ಭಕ್ತ್ಯಾ** ಉಚ್ಚಾರಿತಾತ ರಾಮಕೃಷ್ಣಾದಿನಾಮತ ಇತ್ಯರ್ಥಃ **ಪ್ರಕ್ಷಯಂ** ಆತ್ಯಂತಿಕನಾಶಂ ಯಾಂತಿ **ಯೋಽಕ್ಷರೋ** ನಿತ್ಯನೈಮಿತ್ತಿಕಾದಿನಾಶರಹಿತಃ, **ಯೋಽಜರಃ** ಜರಾವಿಕಾರಪಲಿತಾದಿರಹಿತಃ ಯಃ ಸರ್ವದಾ **ಅಮೃತ ಏವ** ನಿತ್ಯಮುಕ್ತ ಏವ **ಅಜಾದಿಕಂ** ಬ್ರಹ್ಮಾದಿಕಂ **ವಿಶ್ವಂ** ಜಗತ **ಸದಾ** ಯಸ್ಯ **ಕುಕ್ಷಿಗಮ** ಉದರಗತಮ **ತಂ ವಾಸುದೇವಂ ವಯಂ ಪ್ರೀಣಯಾಮಃ** ೧೧

**ಟೀಕಾ ಭಾವಾರ್ಥ : ಯಸ್ಮಿನ ಪರೇ –** ಸರ್ವೋತ್ತಮನಾದ ಯಾವ ವಾಸುದೇವರೂಪಿ ಪರಮಾತ್ಮನಲ್ಲಿ, **ಸ್ವರ್ಪಿತಂ –** ಭಕ್ತ್ಯತಿಶಯದಿಂದ ಸಮರ್ಪಿಸಿದ, **ಕರ್ಮ –** ಶಾಸ್ತ್ರ ವಿಹಿತವಾದ ಕರ್ಮ (ಕರ್ಮಜನ್ಯವಾದ ಪುಣ್ಯಪಾಪಗಳು), **ಅಕ್ಷಯಂ –** ನಾಶರಹಿತವಾದ ಫಲಗಳುಳ್ಳದ್ದಾಗಿದೆಯೋ, **ದುಃಖಾನಿ –** ಸಮಸ್ತವಿಧವಾದ ಕ್ಲೇಶಗಳು, **ಯನ್ನಾಮತಃ –** ಭಕ್ತಿಯಿಂದ ಉಚ್ಚರಿತವಾದ ರಾಮ, ಕೃಷ್ಣ ಇತ್ಯಾದಿ ನಾಮೋಚ್ಚಾರಣೆಯಿಂದ, **ಪ್ರಕ್ಷಯಂ –** ಲವಲೇಶವಿಲ್ಲದಂತೆ ನಾಶವನ್ನು, **ಯಾಂತಿ –** ಹೊಂದುತ್ತವೆಯೋ, **ಯಃ ಅಕ್ಷರಃ –** ಯಾವ ನಾಶ ರಹಿತನಾದ (ನಿತ್ಯ ನೈಮಿತ್ತಿಕಾದಿ ನಾಶರಹಿತ) ಪರಮಾತ್ಮನು, **ಯಃ ಅಜರಃ –** ಯಾವ ಮುಪ್ಪೇ ಮೊದಲಾದ ದೇಹಕ್ಷಯವಿಲ್ಲದ ಪರಮಾತ್ಮನು, **ಯಃ**

**ಸರ್ವದೈವಾಮೃತಃ –** ಯಾವ ಪರಮಾತ್ಮನು ನಿತ್ಯಮುಕ್ತನೋ ಹಾಗೂ, **ಅಜಾದಿಕಂ ವಿಶ್ವಂ –** ಬ್ರಹ್ಮದೇವರೇ ಮೊದಲಾದ ಸಮಸ್ತಜಗತ್ತು, **ಯಸ್ಯ –** ಯಾವ ಪರಮಾತ್ಮನ, **ಸದಾಕುಕ್ಷಿಗಂ –** ಉದರದಲ್ಲಿ ಯಾವಾಗಲೂ ಇರುವುದೋ, **ತಂ –** ಅಂತಹ, **ವಾಸುದೇವಂ –** ವಾಸುದೇವನನ್ನು, **ವಯಂ –** ನಾವು, **ಪ್ರೀಣಯಾಮಃ –** ಸಂತೋಷಗೊಳಿಸುತ್ತೇವೆ. ಅಂದರೆ ವಿಹಿತ ಕರ್ಮಾಚರಣೆಯಿಂದ ಸರ್ವರೂ ವಾಸುದೇವನನ್ನು ಸಂತೋಷಗೊಳಿ'ಬೇಕೆಂದು ಆಚಾರ್ಯರು ಹೇಳಿ, ಇದೇ ವಾಸುದೇವನನ್ನು ಪ್ರೀತಿಪಡಿಸುವ ವಿಧಾನವೆಂಬುದನ್ನು ತಿಳಿಸಿದ್ದಾರೆ.

ಇದರಿಂದ ಶ್ರೀಭಗವಾನ ವೇದವ್ಯಾಸರ ಹಾಗೂ ಅವರ ಪರಮಾಪ್ತ ಶಿಷ್ಯರಾದ **ಶ್ರೀಮದಾನಂದತೀರ್ಥ ಭಗವತ್ಪಾದರ ಪರಂಪರೆಯು ವಾಸುದೇವ ಪ್ರೀತಿವಿಷಯಕವಾದ ಧರ್ಮವುಳ್ಳದ್ದಾಗಿರುವುದರಿಂದ ಭಾಗವತಧರ್ಮವೆನಿಸಿ,** ಇದನ್ನು ಆಚರಿಸುವವರು **ಭಾಗವತರು** ಎಂಬ ಅರ್ಥವು ತಿಳಿದುಬರುತ್ತದೆ.

ಮೇಲೆ ಉಲ್ಲೇಖಿಸಿದ ಶ್ರುತಿಸ್ಮೃತ್ಯುಕ್ತ ಧರ್ಮಾನುಷ್ಠಾನವನ್ನೇ ತಮ್ಮ ಅನುಭಾವಿಕ ನೆಲೆಯಲ್ಲಿ ಕಂಡು, ಅದನ್ನು ಆಡುನುಡಿಯ ಸಾಮಾನ್ಯಭಾಷೆಯಾದ ಕನ್ನಡದಲ್ಲಿ ತಿಳಿಸಿಕೊಟ್ಟ ಪರಂಪರೆಯೇ ಕನ್ನಡದ **ಹರಿದಾಸ ಪರಂಪರೆಯು.** ಈ ಹರಿದಾಸ ಪರಂಪರೆಯು ಸುಲಭರೀತಿಯಲ್ಲಿ ಭಾಷಾ ಗೊಂದಲವಿಲ್ಲದೇ ಭಾವ ಪ್ರಾಧಾನ್ಯತೆಯಿಂದ ಕೂಡಿದ್ದಾಗಿ, **ತತ್ತ್ವಚಿಂತನೆ ನಡೆಸಿ** ಅದನ್ನು ಜನಸಾಮಾನ್ಯರ ಹೃದಯಕ್ಕೆ ತಲುಪಿಸಿದೆ. ಹೀಗೆ ಹರಿದಾಸರು, ವ್ಯಾಸರ ಹಾಗೂ ಆನಂದತೀರ್ಥರ ಭಾವವನ್ನು ಕನ್ನಡ ಪಡಿನುಡಿಯಲ್ಲಿ ಅನುವಾದಿಸಿ, ಭಾಗವತ ಧರ್ಮವನ್ನು ಎಲ್ಲರಿಗು ತಲುಪಿಸಿದ್ದಾರೆ. ಇದೇ ವಿಷಯದ ಭಾವವನ್ನೇ ಶ್ರೀಗೋಪಾಲದಾಸರ **ಭಾಗವತಧರ್ಮ ವಹಿಸಿ ವಿಜಯರಾಯಾ** ಎಂಬ ಮಾತುಗಳು ತಿಳಿಸುತ್ತಿವೆ.

## ೨. ಭಾಗವತಧರ್ಮದಲ್ಲಿನ ಹೃತ್ಪುಂಡರೀಕಸ್ಥನಾದ ಭಗವಂತನ ಕಾಣುವಿಕೆ

ಸಾಕ್ಷಾತ ನಾರಾಯಣಾವತಾರಿಗಳಾದ ಶ್ರೀಭಗವಾನ ವೇದವ್ಯಾಸರಿಂದ ರಚಿತವಾದ ಶ್ರೀಮದ್ಬ್ರಹ್ಮ ಸೂತ್ರದ ಮೇಲಿನ, ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ ಸೂತ್ರಭಾಷ್ಯದಲ್ಲಿನ ಅಧ್ಯಾಯ ೧ರ ಸಮನ್ವಯಾಧ್ಯಾಯದ ಗುಹಾಧಿಕರಣ ಹಾಗೂ ದಹರಾದಿಕರಣದಲ್ಲಿ ಹೃದಯಾಕಾಶದಲ್ಲಿರುವವ ವಿಷ್ಣುವೇ ಎಂದು ನಿರ್ಣಯ ಮಾಡಲಾಗಿದೆ. ಈ ಹೃದಯಸ್ಥ (ಬಿಂಬರೂಪದ)ರೂಪದ ಉಪಾಸನೆಯಿಂದಲೇ ಮೋಕ್ಷವಾಗುತ್ತದೆ. ಇದನ್ನೇ ಶ್ರೀ ಗೋಪಾಲದಾಸರು ಶ್ರೀವಿಜಯರಾಯರ ಸ್ತೋತ್ರದ ನುಡಿ ೧೬, ೧೭ರಲ್ಲಿ ಹೇಳಿದ್ದಾರೆ. ಈ ರೀತಿಯಲ್ಲಿ ಶ್ರೀಮದಾಚಾರ್ಯರಿಂದ ಸಿದ್ಧಾಂತ ಮಾಡಲ್ಪಟ್ಟ ಭಾಗವತಧರ್ಮದಲ್ಲಿ ಹೇಳಿದ ಹೃತ್ಪುಂಡರೀಕಸ್ಥ ಭಗವಂತನ ಧ್ಯಾನೋಪಾಸನೆಯಿಂದ ಸಿದ್ಧಿ ಪಡೆದ ಸಿದ್ಧಪುರುಷರು ಶ್ರೀಹರಿದಾಸರು.

## ಹರಿದಾಸ ಪರಂಪರೆಯಲ್ಲಿ ಸಿದ್ಧಪುರುಷರಾದ ಭೃಗು ಋಷಿಗಳ ಅಂಶದವರಾದ ಶ್ರೀವಿಜಯರಾಯರಲ್ಲಿರುವ ದ್ರಷ್ಟೃತ್ವ

## ೧.ಭೃಗ್ವಂಶರಾದ ಶ್ರೀವಿಜಯರಾಯರು

ಶ್ರೀವಿಜಯದಾಸರ ಸಾಕುಮಕ್ಕಳಾದ ಶ್ರೀಮೋಹನದಾಸರ ವಿಜಯರಾಯರ ಪಾದ ಭಜಿಸಿದವಗನವರತ ವಿಜಯವಾಗುವದಕ್ಕೆ ಸಂದೇಹವ್ಯಾಕೆ ಎಂದು ಪ್ರಾರಂಭವಾಗುವ ಕೃತಿಯೊಂದಿದೆ. ಈ ಕೃತಿಯ ಮೊದಲ ನುಡಿಯಲ್ಲಿ ಶ್ರೀ ವಿಜಯರಾಯರನ್ನು ಹರಿಸರ್ವೋತ್ತಮತ್ವವನ್ನು ತಿಳಿಸಿಕೊಟ್ಟು ಭೃಗು ಋಷಿಗಳೆಂದು ಕೊಂಡಾಡಿದ್ದಾರೆ ಶ್ರೀಮೋಹನ ದಾಸರು.

ಮೊದಲು ಋಷಿಗಳು ಕೂಡಿ ಸತ್ರಯಾಗವ ನಾಕನದಿಯ ತೀರದಿ ರಚಿಸಿ ಇರಲು ಪದುಮ ಸಂಭವನಂಕಭವ ಬಂದು ಮುನಿವೃಂದ ಹೃದಯ ಸಂಶಯ ಹೊಂದಲು ವಿಧಿ ವಿಷ್ಣು ಶಿವರೊಳಗೆ

ಉತ್ತಮರ ತೋರದಲೆ ಮದಡಭಾವವವೊಹಿಸಲು ಒದಗಿ ಭೃಗುಮುನಿಗಳೇ ಸರ್ವೇಶ ವೈಕುಂಠಸದನನೆಂದರುಹಿದರೋ ಯಿವರೋ ೧

## ೨. ಶ್ರೀವಿಜಯರಾಯರಲ್ಲಿರುವ ವೇದ ದ್ರಷ್ಟೃತ್ವ

ಯಜುರ್ವೇದದಲ್ಲಿನ ತೈತ್ತಿರೀಯೋಪನಿಷತನಲ್ಲಿ ಶಿಕ್ಷಾವಲ್ಲಿ ಬ್ರಹ್ಮವಲ್ಲಿ ಹಾಗೂ ಭೃಗುವಲ್ಲಿ ಎಂಬು ಮೂರು ಭಾಗ(ವಲ್ಲಿ)ಗಳಿವೆ. ಈ ಉಪನಿಷತಗೆ ಋಷಿ, ದೇವತಾ, ಛಂದಸ್ಸುಗಳು ಕ್ರಮವಾಗಿ – ೧) ಋಷಿಗಳು – ೧.ಸೂರ್ಯಮಂಡಲದಲ್ಲಿರುವ ವಿಷ್ಣು, ೨.ಬ್ರಹ್ಮ, ೩.ವರುಣ, ಹಾಗೂ ೪.ಭೃಗುಗಳು, ೨)ದೇವತೆ – ಸೂರ್ಯ ಮಂಡಲದಲ್ಲಿರುವ ಹರಿಯೇ ದೇವತೆಯು, ೩)ಛಂದಸ್ಸು – ಉಪನಿಷತು ಭಾಗದಲ್ಲಿ ವಾಕ್ಯರೂಪದಲ್ಲಿರುವ ಕಡೆ ಛಂದೋಗಣನೆಯಿಲ್ಲ, ಛಂದೋಬದ್ಧವಾದ ಕಡೆ ಛಂದಸ್ಸನ್ನು ಅಕ್ಷರ ಗಣನೆಯಿಂದ ಮಾಡಿಕೊಳ್ಳಬೇಕು (ಅಸ್ಯಾ ಉಪನಿಷದೋ ರವಿಮಂಡಲಗೋ ವಿಷ್ಣುಬ್ರಹ್ಮಾ ವರುಣೋ ಭೃಗಶ್ಚೇತಿ ಕ್ರಮಾದೃಷಯಶ್ಚತ್ವಾರಃ ಸ ಏವ ಹರಿರ್ದೇವತಾ ವಾಕ್ಯರೂಪತ್ವಾನ್ನ ಛಂದೋನ್ವೇಷಣಂ ಶಂ ನೋ ಮಿತ್ರ ಆಹವಂತೀತ್ಯಾದೌ ಛಂದೋಬದ್ಧಸ್ಥಲೇsಕ್ಷರಪರಿಗಣನಯಾsನುಷ್ಟುಬಾದಿ ಬೋಧ್ಯಮ – ಶ್ರೀರಾಘವೇಂದ್ರತೀರ್ಥರ ತೈತ್ತಿರೀಯ ಖಂಡಾರ್ಥ) ಮೂರನೆಯ ವಲ್ಲಿ ಭೃಗುವಲ್ಲಿ ಎಂದು ಖ್ಯಾತವಾಗಿ, ವರುಣ ಹಾಗೂ ಭೃಗುಗಳ ಸಂವಾದರೂಪದಲ್ಲಿದೆ.

ವೇದ ದ್ರಷ್ಟಾರರೆಂದರೆ ವೇದವನ್ನು ತಮ್ಮ ಜ್ಞಾನದೃಷ್ಟಿಯಲ್ಲಿ ಕಂಡುಕೊಂಡವರೆಂದರ್ಥ. ಮೂರನೆಯದಾದ ಭೃಗುವಲ್ಲಿಯಲ್ಲಿ ಬ್ರಹ್ಮಜಿಜ್ಞಾಸಾ,ಅನ್ನಬ್ರಹ್ಮತ್ವ, ಪ್ರಾಣಬ್ರಹ್ಮತ್ವ, ಮನೋಬ್ರಹ್ಮತ್ವ, ವಿಜ್ಞಾನಬ್ರಹ್ಮತ್ವ, ಆನಂದಬ್ರಹ್ಮತ್ವ ಎಂಬ ವಿಷಯಗಳಿವೆ, ನಂತರ ಮುಕ್ತರ ಬ್ರಹ್ಮಾನಂದದ(ಏತಥ್ಸಾಮಗಾಯನ್ನಾಸ್ತೇ ....ಇತ್ಯಾದಿ) ವರ್ಣನೆಯಿದೆ. ಇವು ಕ್ರಮವಾಗಿ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ ತತ್ತ್ವಪ್ರತಿಪಾದ್ಯ ಶ್ರೀಮನ್ನಾರಾಯಣನ್ನು ತಿಳಿಸುತ್ತದೆ, ಅಂದರೆ ಪಂಚಕೋಶಗಳಲ್ಲಿ ಶ್ರೀಮನ್ನಾರಾಯಣನ ವ್ಯಾಪ್ತಿ ವ್ಯಾಪಾರಗಳನ್ನು ತಿಳಿಸುತ್ತದೆ. ಈ ಐದೂ ಕೋಶಗಳನ್ನು ತಿಳಿದವನು ಬ್ರಹ್ಮನನ್ನು ತಿಳಿದವನಾಗಿ ಬ್ರಹ್ಮಾನಂದವನ್ನು ಹೊಂದುತ್ತಾನೆ ಎನ್ನುತ್ತದೆ ಭೃಗುವಲ್ಲಿ. (ಶ್ರೀಮದ್ಧರಿಕಥಾಮೃತಸಾರದ ಭೋಜನರಸ ವಿಭಾಗಸಂಧಿ ಪದ್ಯ ೧೩ರಿಂದ ಪದ್ಯ ೨೧ರವರೆಗೆ ಹಾಗೂ ಇದರ ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ ಪಂಚಕೋಶದಲ್ಲಿನ ಭಗವದ್ರೂಪಗಳ ವಿಸ್ತಾರವಾದ ವಿವರಣೆಯಿದೆ)

**ಶ್ರೀಮದಾನಂದತೀರ್ಥ ಭಗವತ್ಪಾದರು ಶ್ರೀಮದ್ವಿಷ್ಣುತತ್ತ್ವ ನಿರ್ಣಯದಲ್ಲಿ** ವೇದಾಪೌರುಷೇಯತ್ವವನ್ನು ಸಿದ್ಧಾಂತಿಸುವಾಗ ವೇದ ದ್ರಷ್ಟಾರ ಋಷಿಗಳ ವೇದ ಮಂತ್ರದ್ರಷ್ಟತ್ವವನ್ನು ಬ್ರಹ್ಮಾಂಡಪುರಾಣದ ಪ್ರಮಾಣದಿಂದ ಮುಂದಿನಂತೆ ನಿರ್ಣಯಿಸಿದ್ದಾರೆ.

ನ ಚ ಸ್ವಯಂಪ್ರತಿಭಾತವೇದ್ಯೈರ್ದೃಷ್ಟಮವೇದವಾಕ್ಯಂ ಭವತಿ **ಪರಂಪರಾಸಿದ್ಧವೇದವಾಕ್ಯಾನುಸಾರಿತ್ವಾತ** ವೇದದ್ರಷ್ಟ ೄಣಾಮುಕ್ತಗುಣತ್ವಾಚ್ಚ ತೇಷಾಮ

ಉಕ್ತಂ ಚ ಬ್ರಹ್ಮಾಂಡೇ –

ವಿಂಶಲ್ಲಕ್ಷಣತೋsನೂನಸ್ತಪಸ್ವೀ ಬಹುವೇದವಿತ

ವೇದ ಇತ್ಯೇವ ಯಂ ಪಶ್ಯೇತ್ಸ ವೇದೋ ಜ್ಞಾನದರ್ಶನಾತ ಇತಿ **ಇಲ್ಲಿನ ಪರಂಪರಾಸಿದ್ಧ ವೆಂಬ ವಾಕ್ಯದ ಶ್ರೀಮತ ಟೀಕಾಕೃತ್ಪಾದರ ಟೀಕಾ ವಾಕ್ಯವು, ಟೀಕಾ – > ಪರಂಪರಾಸಿದ್ಧೇತಿ** ಅಧ್ಯಾಪಕಪರಂಪರಾವತ್ತ್ವೇನ ಯತ್ಪ್ರಸಿದ್ಧಂ ವೇದವಾಕ್ಯಂ ತದನುಸಾರಿತ್ವಾತ ತತ್ಸಮಾನತ್ವಾತ ಏತದುಕ್ತಂ ಭವತಿ ಪರಂಪರಾನಾಮ ಅಧ್ಯೇತೄಣಾಮಧ್ಯಾಪಕಾನಾಂ ಚ ಪೂರ್ವತನಮೇವೇದಮಧೀಮಹೇsಧ್ಯಾಪಯಾಮಶ್ಚೇತಿ ಪ್ರತಿಪತ್ತಿಃ ನತ್ವಧ್ಯಯನಾವಿಚ್ಛೇದಃ

**ಶ್ರೀಮದ್ವಿಷ್ಣುತತ್ತ್ವನಿರ್ಣಯ ಮೂಲದ ಅನುವಾದ :** ದ್ರಷ್ಟಾರರಾದ ಋಷಿಗಳ ಜ್ಞಾನದೃಷ್ಟಿಗೆ ಗೋಚರವಾದ ವಾಕ್ಯವು ವೇದವಾಕ್ಯವೇ ಆಗಿರುತ್ತದೆ. ಯಾಕೆಂದರೆ ಪರಂಪರಾಸಿದ್ಧವಾದ ವೇದವಾಕ್ಯವೇ ಋಷಿಗಳ ಜ್ಞಾನದೃಷ್ಟಿಗೆ ಗೋಚರವಾಗುತ್ತದೆ ಹೊರತು ಅನ್ಯವಾಕ್ಯಗಳಲ್ಲ, ಮತ್ತು ಶಾಸ್ತ್ರದಲ್ಲಿ ಹೇಳಿದ ಗುಣಗಳು ಈ ವೇದವಾಕ್ಯವನ್ನು ಜ್ಞಾನದೃಷ್ಟಿಯಿಂದ ಕಂಡಕೊಂಡವರಿಗೆ(ವಸಿಷ್ಠಾದಿ ಋಷಿಗಳಿಗೆ)ಇರುತ್ತದೆ. ವೇದದ್ರಷ್ಟೃಗಳಿಗೆ ಈ ಗುಣಗಳನ್ನು ಎಲ್ಲಿ ಹೇಳಿದ್ದಾರೆಂದರೆ ಬ್ರಹ್ಮಾಂಡಪುರಾಣದಲ್ಲಿ ಮುಂದಿನಂತೆ ಹೇಳಿದ್ದಾರೆ – ಇಪ್ಪತ್ತುಗುಣಗಳಿಗೆ ಕಡಿಮೆಯಿಲ್ಲದಂತೆ ಗುಣವುಳ್ಳವನಾಗಿ, ತಪಸ್ವಿಯೂ, ವೇದಾಧ್ಯಾಯಿಯಾಗಿಯೂ ಇರುವಂತಹ ಋಷಿಯ ಜ್ಞಾನದೃಷ್ಟಿಗೆ ಕಂಡ ಮಂತ್ರವು ವೇದವೇ ಆಗಿರುತ್ತದೆ ಎಂದು.

**ಟೀಕಾ :** ಆಚಾರ್ಯರ ಮೂಲದಲ್ಲಿನ **ಪರಂಪರೆಯಿಂದ ಸಿದ್ಧವಾದದ್ದು** ಅಂದರೆ ಅಧ್ಯಾಪಕಪರಂಪರೆಯುಳ್ಳದ್ದಾಗಿಯೇ ಯಾವುದು ಪ್ರಸಿದ್ಧಿಹೊಂದಿ, ವೇದವಾಕ್ಯವಾಗಿದೆಯೋ ಅದನ್ನು, ದ್ರಷ್ಟಾರರ ಮಂತ್ರಗಳು ಅನುಸರಿಸಿ, ಅದಕ್ಕೆ ಸಮಾನವಾಗಿರುವುದರಿಂದ ವೇದತ್ವವಿದೆ, ಇದರಿಂದ ಏನನ್ನು ಹೇಳಿದಂತಾಯಿತೆಂದರೆ, ಪರಂಪರೆಯೆಂದರೆ ಅಧ್ಯೇತೃ(ವೇದ ಓದುವವ) ಹಾಗೂ ಅಧ್ಯಾಪಕ(ಮಂತ್ರೋಚ್ಚಾರಮಾಡಿಸುವ ಉಪಾಧ್ಯಾಯ)ರಿಬ್ಬರಿಗೂ ಪುರಾತನವಾದ ವೇದವನ್ನು ಓದುತ್ತೇನೆ(ಅಧ್ಯೇತೃವಿಗೆ), ಓದಿಸುತ್ತೇನೆ(ಅಧ್ಯಾಪಕನಿಗೆ) ಎಂಬ ಜ್ಞಾನವಿದ್ದೇ ಅಧ್ಯಯನ ವಿಚ್ಛೇದವಿಲ್ಲದೆ ಅಧ್ಯಯನ ಪರಂಪರೆ ನಡೆಯುತ್ತದೆ, ಈ ರೀತಿಯಾಗಿಯೇ ಋಷಿಗಳು ವೇದವಾಕ್ಯವನ್ನು ಕಂಡಿರುವರಾದ್ದರಿಂದ ಋಷಿಗಳಿಗೆ ವೇದದ್ರಷ್ಟೃತ್ವವಿದೆ.

ಹೀಗೆ ಭೃಗು ಋಷಿಗಳ ಅಂಶದವರಾದ ಶ್ರೀವಿಜಯರಾಯರ ದ್ರಷ್ಟಾರತ್ವವು ಸಿದ್ದವಾಗುತ್ತದೆ. ಇಷ್ಟೇ ಅಲ್ಲದೇ ಶ್ರೀಮದ್ಭಾಗವತದ ಏಕಾದಶಸ್ಕಂಧದ ಹದಿನಾಲ್ಕನೇ ಅಧ್ಯಾಯದಲ್ಲಿ ಉದ್ಧವನಿಗೆ ಭಗವಂತನಿಂದ ಭಗವದ್ಭ ಕ್ತಿ ಹಾಗೂ ಹೃದಯಸ್ಥಿತ ಭಗವಂತನ ಧ್ಯಾನಪ್ರಕಾರ ಉಪದೇಶಿಸಲ್ಪಡುವಾಗಿನ ಸಂದರ್ಭದಲ್ಲಿ, **ಭೃಗ್ವಾದಿಗಳು ಈ ಭಕ್ತಿಯೋಗವನ್ನು ಬ್ರಹ್ಮನಿಂದ ಉಪದೇಶಹೊಂದಿದವರಾಗಿದ್ದಾರೆ ಎಂದು ತಿಳಿಸಲಾಗಿದೆ.** ಭಗವಂತನು ಉದ್ಧವನಿಗೆ ಹೇಳುತ್ತಾನೆ – ಪ್ರಲಯಕಾಲದಲ್ಲಿ ನಷ್ಟವಾದ ಈ ಭಾಗವತಧರ್ಮವನ್ನು ನಾನೇ ಪುನಃ ಬ್ರಹ್ಮನಿಗೆ ಉಪದೇಶಿಸಿದೆನು, ಬ್ರಹ್ಮನು ಮನುವಿಗೆ, ಮನುವು **ಭೃಗು, ಅಂಗೀರಸ, ಮರೀಚಿ, ಪುಲಹ, ಅತ್ರಿ, ಪುಲಸ್ತ್ಯ ಹಾಗು ಕ್ರತುವೆಂಬ** ಸಪ್ತ ಋಷಿಗಳಿಗೆ ಈ ಭಾಗವತಧರ್ಮವನ್ನು ಉಪದೇಶಿಸಿದನು ಎಂದಿದೆ, ಇವರಿಂದ ದೇವತೆಗಳು, ಪಿತೃಗಳು, ದಾನವರು, ಗುಹ್ಯಕರು, ಮನುಷ್ಯರೂ, ಸಿದ್ಧರೂ, ವಿದ್ಯಾಧರರರೂ, ಚಾರಣಾದಿ ಸಮಸ್ತದೇವಯೋನಿಗಳು ಈ ಭಾಗವತಧರ್ಮವನ್ನು ಪಡೆದರು ಎಂದಿದೆ (ಉದ್ಧವ ಉವಾಚ : ವದಂತಿ ಕೃಷ್ಣಶ್ರೇಯಾಂಸಿ ಬಹೂನಿ ಬ್ರಹ್ಮವಾದಿನಃ ತೇಷಾಂ ವಿಕಲ್ಪಪ್ರಾಧಾನ್ಯಮುತಾಹೋ ಏಕಮುಖ್ಯತಾ ೧ ಭವತೋದಾಹೃತಃ ಸ್ವಾಮಿನ ಭಕ್ತಿಯೋಗೋಽನಪೇಕ್ಷಿತಃ ನಿರಸ್ಯ ಸರ್ವತಃ ಸಂಗಂ ಯೇನ ತ್ವಯ್ಯಾವಿಶೇನ್ಮನಃ ೨ ಶ್ರೀಭಗವಾನುವಾಚ : ಕಾಲೇನ ನಷ್ಟಾ ಪ್ರಲಯೇ ವಾಣೀಯಂ **ವೇದಸಂಜ್ಞಿತಾ ಮಯಾಽದೌ ಬ್ರಹ್ಮಣೇ ಪ್ರೋ** ೩ ತೇನ ಪ್ರೋ ಪೂರ್ವಜಾಯ ಸಾ ತತೋ **ಭೃಗ್ವಾದಯೋಽಗೃಹ್ಣನ್ಸಪ್ತಬ್ರಹ್ಮಮಹರ್ಷಯಃ** > ೪ ತೇಭ್ಯಃ ಪಿತೃಭ್ಯಸ್ತತ್ಪುತ್ರಾ ದೇವದಾನವ ಗುಹ್ಯಕಾಃ ಮನುಷ್ಯಾಃ ಸಿದ್ಧಗಂಧರ್ವಾಃ ಸವಿದ್ಯಾಧರ ಚಾರಣಾಃ ) ಈ ಭಾಗವತದ ವಾಕ್ಯದಿಂದ ಭೃಗ್ವಂಶರಾದ ಶ್ರೀವಿಜಯರಾಯರಿಗೆ ಈ ಹೃತ್ಪುಂಡರೀಕದಲ್ಲಿ ಭಗವಂತನನ್ನು ಕಾಣುವ ಭಕ್ತಿಪ್ರಧಾನವಾದ ಭಾಗವತಧರ್ಮವು ಉಪದೇಶಿಸಲ್ಪಟ್ಟಿದೆ ಎಂಬುದೂ ಸಹ ಸಿದ್ಧವಾಗುತ್ತದೆ.

ಶ್ರೀವಿಜಯದಾಸರ ಶಿಷ್ಯರು ಶ್ರೀವೇಣುಗೋಪಾಲವಿಠ್ಠಲರು, ಇವರ ಶಿಷ್ಯರು ಶ್ರೀವ್ಯಾಸವಿಠ್ಠಲರಾದ ಕಲ್ಲೂರ ಸುಬ್ಬಣ್ಣದಾಸರು, ಇವರ ಶಿಷ್ಯರೇ ವೈರಾಗ್ಯಶಾಲಿ ತಮ್ಮಣ್ಣದಾಸರಾದ ಶ್ರೀರಘುಪತಿವಿಠ್ಠಲರು. ಇವರು ಶ್ರೀವಿಜಯದಾಸರ ೧೦೧ಸುಳಾದಿಗಳನ್ನು ಆಧರಿಸಿ ಅಧ್ಯಾತ್ಮಮಾಲಾ ಎಂಬ ಗದ್ಯರೂಪದ ಕೃತಿಯನ್ನು

ರಚಿಸಿದ್ದಾರೆ. ಈ ಕೃತಿಯಲ್ಲಿ ತಾರತಮ್ಯವನ್ನು ನಿರೂಪಿಸುವ ಸಂದರ್ಭದಲ್ಲಿ **ಭೃಗುಋಷಿಗಳ ಪ್ರಕರಣ** ಎಂಬ ಒಂದು ಭಾಗವನ್ನು ರಚಿಸಿದ್ದಾರೆ. ಈ ಭಾಗವು ತೈತ್ತಿರೀಯೋಪನಿಷತು ಭೃಗುವಲ್ಲಿಯಲ್ಲಿ ವರುಣನಿಂದ ಭೃಗುವಿಗೆ ಉಪದೇಶಿಸಲ್ಪಟ್ಟ ವಿಚಾರವನ್ನೂ ಒಳಗೊಂಡಿದೆ. ವಿಜಯರಾಯರ ಸ್ವರೂಪವನ್ನು ತಿಳಿಸಿಕೊಡುವುದಾಗಿದೆ. ಆ ಭಾಗವು ಮುಂದಿನಂತಿದೆ–

**ಭೃಗುಋಷಿಗಳ ಪ್ರಕರಣ**

ನಾರದರ ತರುವಾಯ ಕ್ರಮ, ಇನ್ನು ನಾರದ ತೈಜಸರುದ್ರನ ದ್ವಾರ ಇಂದ್ರ ದಕ್ಷಪ್ರಜೇಶ್ವರನ ದ್ವಾರ ಸೋಮ, ವರುಣನ ದ್ವಾರ ಶರೀರವುಳ್ಳಂಥಾ ಭೃಗು ಮುನೇಶ್ವರರು. ಅಗ್ನಿ ದಕ್ಷಪ್ರಜೇಶ್ವರನ ಪತ್ನಿ ಪ್ರಸೂತಿಗೆ ಸಮರು. ಇವರು ಪರಮಾತ್ಮನ ಆರಾಧನೆಗೆ ಒಮ್ಮಿಂದೊಮ್ಮೆ ಮನಸಿಟ್ಟ ಕಾಲದಲ್ಲಿ ಹತ್ತದೇ ದಕ್ಷಪ್ರಜೇಶ್ವರನ ಕರುಣಾ ಕೇಳಲು, ನಿಮಗೆ ತಿಳಿದ ವೇದೋಕ್ತ ಗುಣಗಳನ್ನು ಪರಮಾತ್ಮನಲ್ಲಿ ಉಪಸಂಹಾರ ಮಾಡುತ್ತ, ಜ್ಞಾನನಿಷ್ಠನಾಗಿದ್ದರೆ ದೇವರು ಒಲಿದಾನೆನಲು ಹೀಗೆ ಆಚರಿಸಲು,ಉಪದೇಶ ಮಾಡಿದ ಪ್ರಕಾರ, ಆಚರಿಸಿದ ಪ್ರಕಾರ **ಅನ್ನಮಯಾದಿ ಅಷ್ಟರೂಪಗಳು ಕ್ರಮಾತು ಉಪದೇಶ ಮಾಡಿಕೊಂಡು, ಪರಮಾತ್ಮನ ಪ್ರತ್ಯಕ್ಷೀಕರಿಸಲು, ಪರಮಾತ್ಮ ಪ್ರತ್ಯಕ್ಷನಾಗಿ ನೀನು ಧನ್ಯನೆಂದು, ಆತನ ವೇದದೃಷ್ಟನ್ನ ಮಾಡಿ ಅಧಿಕ ವೇದೋಕ್ತ ಸ್ತುತ್ಯನಾಗಿ, ನೀನು ದಾವ ವರ ಬೇಡುತಿದ್ದಿ ಬೇಡೆನಲು – ನಿನ್ನ ಜ್ಞಾನದ ವಿನಹವಾಗಿ ಇನ್ನೊಂದು ಸರ್ವಥಾ ಒಲ್ಲೇನೆನಲು ಹಾಗೆ ಪರಮಾತ್ಮ ಒಡಂಬಟ್ಟು ಮಹಾಋಷಿ ಮಾಡಿದ.** ಲೋಕಕ್ಕೆ ಜ್ಞಾನೋಪದೇಷ್ಟ್ರುನಾಗು, ಲೋಕರಿಗೆ ಸಂದೇಹ ನಿವೃತ್ಯರ್ಥವಾಗಿ, ಬ್ರಹ್ಮರುದ್ರರ ಅವಮಾನ ನೀನು ಮಾಡಿದರೂ ಪಾಪ ಬರಬ್ಯಾಡಾ ಅಥವಾ ಪಾಪಕ್ಕೆ ಜರಾವ್ಯಾಧನಾಗಿ ನನ್ನಲ್ಲಿ ಬಾಣ ಹಾಕಿದರೆ ನಿನಗೆ ಸದ್ಗತಿ ಕೊಡಥೀನಿ, ಇಂಥಾ ಜ್ಞಾನ ನಿನಗೆ ಕೊಟ್ಟಿದ್ದೇನೆಂದು, ದಾರು ನಿನ್ನ ಅನುಸರಿಸಿದರೆ ಅವರು ಪ್ರಾಜ್ಞರಾದಾರು ಎಂದು ಪರಮಾತ್ಮ ವರಕೊಟ್ಟ ಪ್ರಯುಕ್ತ, ಇವರು **ತಪಮಾಡಿ ವಿಜಯಪದ** ಪಡೆದ ಪ್ರಯುಕ್ತ, **ಜ್ಞಾನಾರ್ಥವಾಗಿ ಇವರ ಪಾದಸ್ಮೃತಿ ಮಾಡಿದರೆ, ನಿರ್ಮಲಜ್ಞಾನ ಪ್ರಾಪ್ತವಾಗೋದು. ಇದು ಭೃಗು ಮುನೇಶ್ವರನ ಪ್ರಕರಣ.** ಇವರ ಜ್ಞಾನ ಎಂಥಾದ್ದು ಎಂದರೆ ಪರಮಾತ್ಮನ ಒದ್ದು, ಅವನ ಸಂಗಾತ ಪೂಜೆಗೊಂಬ ಜ್ಞಾನ ಎಂಥಾದ್ದೋ, ಕುಚ್ಛಿತಯೋನಿಯಲ್ಲಿ ವ್ಯಾಧನಾಗಿ ಬಾಣದಿಂದ ಗ್ರಾಸಾರ್ಥವಾಗಿ (ಆಹಾರಕ್ಕಾಗಿ) ಪರಮಾತ್ಮಗೆ ಪ್ರಯೋಗಮಾಡಿ ಸದ್ಗತಿ ಐದಿದ ಜ್ಞಾನ ಎಂಥಾದ್ದೋ? ಸತ್ರಯಾಗದದಲ್ಲಿ ಋಷಿಗಳಿಗೆ ನಾರದರು ಪರಮಾತ್ಮನ ನಿರ್ಧಾರಾರ್ಥವಾಗಿ ಭೃಗುಮುನೇಶ್ವರರಿಗೆ ಮೊರೆಹೊಕ್ಕರೆ ತಿಳಸ್ಯಾನು ಎಂಬ ಜ್ಞಾನ ಎಂಥಾದ್ದೋ, ದಕ್ಷಪ್ರಜೇಶ್ವರನ ಯಜ್ಞದಲ್ಲಿ ರುದ್ರದೇವರ ನಿಮಿತ್ಯ ಮಹಾದ್ರೋಹದಿಂದ ಯಜ್ಞವಾಟ ಹತವಾದ ಮ್ಯಾಲೆ ಸಾಕ್ಷಾತ್ ಬ್ರಹ್ಮದೇವರು ಬಂದು ರುದ್ರದೇವರನ ಶಾಂತ ಮಾಡಿ ಯಜ್ಞ ರಕ್ಷಿಸಿ ಪುನಹ ಪರಮಾತ್ಮನನ್ನು ದಕ್ಷಪ್ರಜೇಶ್ವರಗೆ ದರ್ಶನ ಮಾಡಿಸುವ ಜ್ಞಾನ ಎಂಥಾದ್ದೋ, ಪರಮಾತ್ಮನ ನಿರ್ಧಾರ ಮಾಡೋ ನಿಮಿತ್ಯ ನಿನ್ನಕಿಂತ ಸೋತ್ತಮರಾದ ಬ್ರಹ್ಮದೇವರಿಗೆ ವಂದಿಸದೇ ತುಚ್ಛೀಕರಿಸಿದ ಜ್ಞಾನ ಎಂಥಾದ್ದೋ, ತತ್ವಾಭಿಮಾನಿಗಳಿಗೆ ಸಮರಾಗಿ ಇಹೋ ಜ್ಞಾನ ಎಂಥಾದ್ದೋ? ಇಂಥಾ ಸುಜ್ಞಾನವುಳ್ಳ ಭೃಗುಮುನೇಶ್ವರರ ಮಹತ್ಮೆ ಆರಿಂದ ವರ್ಣಿಸಲಿಕ್ಕೆ ಶಕ್ಯ. ಇವರಿಗೆ ವೈಕುಂಠದಲ್ಲಿ ಸಮಗ್ರ ಭೂಭಾಗದಲ್ಲಿ ಹೋಗಲಿಕ್ಕೆ ತಡೆ ಇಲ್ಲ. ಇಂಥಾ ಭೃಗು ಮುನೇಶ್ವರರು ಎನ್ನ ಮ್ಯಾಲೆ ಪೂರ್ಣ ಅನುಗ್ರಹಮಾಡಿ ಸುಜ್ಞಾನಾಬ್ಧಿಯೊಳಗೆ ಮುಳುಗಿಸಲಿ – ಎಂಬುದಾಗಿ ಭೃಗುಋಷಿಗಳ ಪ್ರಕರಣದಲ್ಲಿ ನಿರೂಪಿಸಿದ್ದಾರೆ.

ಶ್ರೀಗೋಪಾಲದಾಸರ ಹಾಗೂ ಶ್ರೀರಘುಪತಿ ವಿಠ್ಠಲರ(ವೈರಾಗ್ಯಶಾಲಿ ತಿಮ್ಮಣ್ಣದಾಸರ) ವಚನದಂತೆ ನಿರ್ಮಲವಾದ ಜ್ಞಾನ ಹರಿವಾಯುಗಳಲ್ಲಿ ಉಂಟಾಗಲು ಶ್ರೀವಿಜಯದಾಸರ ಪಾದ ಸ್ಮರಣೆಮಾಡುವುದು ಎಲ್ಲ ಸಜ್ಜನರ ಕರ್ತವ್ಯವಾಗಿದೆ.

ಸಂಗ್ರಹ : ಯಲಮೇಲಿ. ಪುಷ್ಪಹಾಸ. ಬಾಲಕೃಷ್ಣ
ಬೆಂಗಳೂರು

**ಅಜ್ಞಾನತಿಮಿರಚ್ಛೇದಂ ಬುದ್ದಿಸಂಪತ್ಪ್ರದಾಯಕಮ**
**ವಿಜ್ಞಾನವಿಮಲಂ ಶಾಂತಂ ವಿಜಯಾಖ್ಯಗುರುಂ ಭಜೇ**

**೧)ಅಜ್ಞಾನತಿಮಿರಚ್ಛೇದಂ –** ಸಕಲ ಶ್ರುತಿಸ್ಮೃತಿಗಳ ಸಾರ ಹರಿಸರ್ವೋತ್ತಮತ್ವವು, ಈ ಹರಿಸರ್ವೋತ್ತಮತ್ವಜ್ಞಾನವಿಲ್ಲದಿದ್ದರೆ ಅದೇ ಅಜ್ಞಾನ, ಇಂತಹ ಅಜ್ಞಾನವೆಂಬ ಕತ್ತಲೆಯನ್ನು ಓಡಿಸಿದವರು, ಸತ್ರಯಾಗದಲ್ಲಿ ನಾರದರು ಈ ಯಾಗಫಲವೂ ಯಾರಿಗೆ ಅರ್ಪಿಸುವಿರಿ ಎಂದು ನೆರೆದಿದ್ದ ಋಷಿ ಮುನಿಗಳನ್ನು ಕೇಳಿದಾಗ, ಆ ಸಂದರ್ಭದಲ್ಲಿ ತ್ರಿಮೂರ್ತಿಗಳಲ್ಲಿ ಹರಿಯೇ ಹರಿಸರ್ವೋತ್ತಮನೆಂದು ತಿಳಿಸಿಕೊಟ್ಟವರು ಶ್ರೀವಿಜಯದಾಸರು. ಹೀಗೆ ಹರಿ ಸರ್ವೋತ್ತಮತ್ವವನ್ನು ತಿಳಿಸಿಕೊಟ್ಟು ಅಜ್ಞಾನವೆಂಬ ಕತ್ತಲೆಯನ್ನು ಓಡಿಸುವ, **೨) ಬುದ್ದಿಸಂಪತ್ಪ್ರದಾಯಕಮ–** ಶ್ರೀಪುರಂದರದಾಸರು ಸಂಕಲ್ಪಗೈದಿದ್ದ ಐದು ಲಕ್ಷ ಕೃತಿಯಲ್ಲಿ, ನಾಲ್ಕು ಲಕ್ಷ ಎಪ್ಪತ್ತೈದು ಸಾವಿರ ಸಂಖ್ಯಾಕವಾದ ಪದ, ಸುಳಾದಿ ಉಗಾಭೋಗಗಳನ್ನು ರಚಿಸಿದರು. ಉಳಿದ ಇಪ್ಪತ್ತೈದು ಲಕ್ಷಸಂಖ್ಯಾಕವಾದ ಕೃತಿಯನ್ನು ತಂದೆಯ ಆಜ್ಞೆಯಂತೆ ಶ್ರೀವಿಜಯದಾಸರು (ಪುರಂದರದಾಸರ ಮಕ್ಕಳಾದ ಮಧ್ವಪತಿಗಳೇ ವಿಜಯದಾಸರಾಗಿ, ಭೂಸುರ ಜನ್ಮದಿಂದ) ರಚಿಸಿ ಸಜ್ಜನರಿಗೆ ಬುದ್ಧಿಗೆ ಅನುಕೂಲವಾದ ಸಂಪತ್ತನ್ನು ರಚಿಸಿಕೊಟ್ಟದ್ದರಿಂದ ಬುದ್ಧಿಯೆಂಬ ಸಂಪತ್ತನ್ನು ಚೆನ್ನಾಗಿ ನೀಡುವ, **೩) ವಿಜ್ಞಾನವಿಮಲಂ –** ಶ್ರೀಮದಾಚಾರ್ಯರ ಸಿದ್ಧಾಂತವಾದ ಭಾಗವತ ಧರ್ಮಾನುಷ್ಠಾನದಿಂದ ಭಗವದಪರೋಕ್ಷಹೊಂದಿದವರಾಗಿ ದುರಿತವನ್ನು ದೂರ ಓಡಿಸಿ, **೪) ಶಾಂತಂ –** ಭಗವದಪರೋಕ್ಷಾನು – ಭವದಿಂದ ಅತ್ಯಂತ ಚಿತ್ತ ಶಾಂತತೆಯುಳ್ಳವರಾಗಿ ಭಕ್ತರಲ್ಲಿ ದಯೆಹೊಂದಿದ, **ವಿಜಯಾಖ್ಯಗುರುಂ ಭಜೇ** –ಶ್ರೀವಿಜಯದಾಸರೆಂಬ ಗುರುಗಳನ್ನು ಸೇವಿಸುತ್ತೇನೆ.

ಸಂಗ್ರಹ : ಯಲಮೇಲಿ. ಪುಷ್ಪಹಾಸ. ಬಾಲಕೃಷ್ಣ
ಬೆಂಗಳೂರು